ಸಾಕ್ಷಿಯನ್ನು ದಿನಾಂಕಃ 10-02-2020 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.
ಮುಂದುವರೆದ ಪಾಟೀಸವಾಲುಃ ಶ್ರೀ ವಿ ಎಂ ಬಿ ವಕೀಲರಿಂದ

ನಮ್ಮ ಮನೆಯಲ್ಲಿ ನನ್ನ ತಾಯಿಯನ್ನು ಹೊರತುಪಡಿಸಿ ಒಟ್ಟು 7 ಜನ ವಾಸವಾಗಿದ್ದೇವೆ. ನನಗೆ 3 ಜನ ಅಣ್ಣಂದಿರು. ನನ್ನ ಅಣ್ಣಂದಿರಿಗೆ ಮದುವೆಯಾಗಿದ್ದು ಬೇರೆ ಕಡೆ ವಾಸವಾಗಿರುತ್ತಾರೆ. ನಮ್ಮ ಮೂಲ ಮನೆ ದಾವಾ ಸ್ಥಳದಿಂದ ಸುಮಾರು 1/2 ಕಿ ಮೀ ದೂರ ಇದೆ . ದಾವಾ ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ನಾವು ಕಬ್ಜೆನಲ್ಲಿ ಇದ್ದ ಆಸ್ತಿ ದಾವಾ ಆಸ್ತಿಯ ಸುತ್ತ ಇರಲಿಲ್ಲ ಎಂದರೆ ಸರಿ . ನಾವು ಖರೀದಿ ಮಾಡುವ ಕಾಲಕ್ಕೆ ದಾವಾ ಸ್ಥಳ ಖುಷ್ಕಿ ಜಾಗ ಆಗಿತ್ತು. ದಾವಾ ಆಸ್ತಿ ಖರೀದಿ ಮಾಡುವ ಕಾಲಕ್ಕೆ ದಾವಾ ಆಸ್ತಿ ಯಾವ ರೀತಿಯ ಆಸ್ತಿ ಎಂದು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಜಂಪ್ರಾ ನಂ 2 ರ ಆಸ್ತಿ ದಾವಾ ಜಂಪ್ರಾ ನಂ 1 ರ ಆಸ್ತಿಯ ಯಾವ ದಿಕ್ಕಿಗೆ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಎರಡೂ ಕೂಡ ಒಂದೇ ಕಾಂಪೌಂಡ್ ನಲ್ಲಿ ಇರುತ್ತದೆ, ದಿಕ್ಕು ಹೇಳಲು ಬರುವುದಿಲ್ಲಾ ಎನ್ನುತ್ತಾರೆ. ಈ ಎರಡೂ ಜಾಗಗಳು ಪೂರ್ವದಿಂದ ಪಶ್ಚಿಮಕ್ಕೆ ಸ್ವಲ್ಪ ಇಳಿಜಾರಾಗಿದೆ. ಎರಡೂ ಜಾಗಗಳು ಒಂದೇ ಸಮತಟ್ಟಾಗಿದೆ. ಮಳೆಗಾಲದಲ್ಲಿ ದಾವಾ ಜಾಗದಲ್ಲಿ ಬೀಳುವ ಮಳೆ ನೀರು ಪೂರ್ವದಿಂದ ಪಶ್ಚಿಮಕ್ಕೆ ಹರಿದು ಹೋಗುತ್ತದೆ. ನಮ್ಮ ಜಾಗದ ನಂತರ ಬೇರೆಯವರ ಜಾಗ ಇದ್ದು ಆ ನೀರು ಅವರ ಜಾಗದ ಮೂಲಕ ಮುಂದೆ ಹರಿದು ಹೋಗುತ್ತದೆ . ಆ ನೀರು ಮುಂದೆ ಹರಿದು ಎಲ್ಲಿ ಹೋಗಿ ಸೇರುತ್ತದೆ ಗೊತ್ತಿಲ್ಲ. ನಮ್ಮ ಜಾಗದ ನಂತರ ಬರುವ ಭಟ್ಟರ ಜಾಗದಲ್ಲಿ ಅವರು ನೀರಿನ ಕಾರಿಗೆ ಮಾಡಿಲ್ಲ. ನಮ್ಮ ಜಾಗದ ಉತ್ತರ ದಿಕ್ಕಿಗೆ ಚಿಕ್ಕನಕೋಡದಿಂದ ಹೊಸೋಡ ಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಆ ರಸ್ತೆ ಮುಂದೆ ಹಾದು ಜನಕಡಕ ವರೆಗೆ ಹೋಗುತ್ತದೆ ಎಂದರೆ ಸರಿ. ಆ ರಸ್ತೆ ಎಷ್ಟು ಅಗಲವಿದೆ ಎಂದರೆ ಸಾಕ್ಷಿ ಒಂದು ಬಸ್ ಹೋಗುವಷ್ಟು ಅಗಲ ಇದೆ ಎನ್ನುತ್ತಾರೆ . ನಾವು ದಾವಾ ಆಸ್ತಿ ಖರೀದಿ ಮಾಡಿದ ನಂತರ ರಸ್ತೆಯನ್ನು ಡಾಂಬರೀಕರಣ ಮಾಡಿದ್ದಾರೆ. ಎಷ್ಟು ವರ್ಷದ ಹಿಂದೆ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಾವು ಜಮೀನು ಖರೀದಿ ಮಾಡಿದ ನಂತರ ಆ ರಸ್ತೆಯನ್ನು ಅಗೆದು ಪೈಪ್ ನ್ನು ಅಳವಡಿಸಿದ್ದಾರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ರೀತಿ ರಸ್ತೆಯನ್ನು ಎಷ್ಟು ಫೂಟು ಉದ್ದ , ಅಗಲ, ಆಳ ಅಗೆದಿದ್ದರು ಎಂದು ನನಗೆ ಗೊತ್ತಿಲ್ಲ. ಆ ರೀತಿ ರಸ್ತೆಯನ್ನು 15-20 ಜನರು ಸೇರಿ ಅಗೆದಿದ್ದರು. ಆ ರೀತಿ ರಸ್ತೆ ಅಗೆಯುವಾಗ ನಾನು ಮತ್ತು ನನ್ನ ತಾಯಿ ಅವರನ್ನು ತಡೆಯಲು ಪ್ರಯತ್ನಿಸಿದೆವು . ಅವರು ಕುಠಾರಿ ಹಾಗೂ ಪಿಕಾಸು ವನ್ನು ಉಪಯೋಗಿಸಿ ಅಗೆಯುತ್ತಿದ್ದರು. ನಾವು ಅವರುಗಳು ನಮ್ಮ ಜಾಗದಲ್ಲಿ ನೀರು ಹರಿಯುವಂತೆ ರಸ್ತೆಗೆ ಅಡ್ಡವಾಗಿ ಪೈಪ್ ಹಾಕಕೂಡದು ಎಂದು ಪೋಲೀಸರಿಗೆ ದೂರು ನೀಡಿದ್ದೆವು. ಪೋಲೀಸರು ಸ್ಥಳಕ್ಕೆ ಬಂದು ಆ ಬಗ್ಗೆ ವಿಚಾರಿಸಿದ್ದರು. ನಮ್ಮ ಜಾಗದಲ್ಲಿ ಪೋಲೀಸರು ಪಂಚನಾಮೆ ಮಾಡಿದ್ದರು . ನಮ್ಮ ತಾಯಿಯಿಂದ ಹೇಳಿಕೆ ಪಡೆದ ಬಗ್ಗೆ ನಮಗೆ ಹಿಂಬರಹ ನೀಡಿರಲಿಲ್ಲ. ದೂರಿನ ಕಾಪಿಯನ್ನು ನಾವು ಇಟ್ಟುಕೊಂಡಿಲ್ಲ. ಆ ದೂರಿನ ವಿಚಾರಣೆ ಎಲ್ಲಿಗೆ ಬಂತು ಎಂದು ಇದುವರೆಗೂ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರಿಂದ ಆ ಬಗ್ಗೆ ವಿಚಾರಿಸಿಲ್ಲ ಎನ್ನುತ್ತಾರೆ.

ಮೇಲೆ ಹೇಳಿದ ರಸ್ತೆಯನ್ನು ಜಿಲ್ಲಾ ಪಂಚಾಯತ್ ರವರು ಮಾಡಿದ ರಸ್ತೆ ಎಂದರೆ ನನಗೆ ಗೊತ್ತಿಲ್ಲ. ಆ ರಸ್ತೆ ದುರಸ್ತಿ ಯಾರು ಮಾಡುತ್ತಾರೆ ಗೊತ್ತಿಲ್ಲ . ಹಡಿನಬಾಳದಿಂದ ಜನಕಡಕಲ್ ವರೆಗೆ ರಸ್ತೆ 15 ಕಿ ಮೀ ಇರಬಹುದು. ಈ ರಸ್ತೆ ಬೆಟ್ಟದ ನಡುವೆ ಹಾದುಹೋದ ರಸ್ತೆ ಎಂದರೆ ಸರಿ . ಆ ರಸ್ತೆಯ ಉದ್ದಕ್ಕೂ ಎಲ್ಲೆಲ್ಲಿ ಗುಡ್ಡದಿಂದ ನೀರು ಹರಿಯುತ್ತದೆಯೋ ಅಲ್ಲೆಲ್ಲಾ ಕಾರಿಗೆ ಮಾಡಿ ಬ್ರಿಜ್ ಮಾಡಿರುತ್ತಾರೆಂದರೆ ಸಾಕ್ಷಿ ಬೇರೆ ಕಡೆ ನನಗೆ ಗೊತ್ತಿಲ್ಲ ಆದರೆ ನಮ್ಮ ಮನೆಯ ಬಳಿ ಇರುವ ಗುಡ್ಡದ ನೀರು ಕೆಳಗೆ ಇರುವ ಕಾಲುವೆ ಮುಖಾಂತರ ಹರಿದು ಮುಂದಕ್ಕೆ ಹೋಗುತ್ತದೆ ಎನ್ನುತ್ತಾರೆ . ದಾವಾ ಜಾಗ ಇರುವ ಮಜಿರೆ ಯನ್ನು ಗುಂಡಿಬೈಲ್ ಎನ್ನುತ್ತಾರೆ. ಅಲ್ಲಿ ಗ್ರಾಮ ಪಂಚಾಯತಿ ಆಫೀಸ್ ಇದೆ ಎಂದರೆ ಸರಿ. ಗ್ರಾಮ ಪಂಚಾಯತಿ ಜಿಲ್ಲಾ ಪಂಚಾಯತಿ ನಿರ್ದೇಶನದಂತೆ ಕೆಲಸ ಮಾಡುತ್ತದೆ ಎಂದರೆ ನನಗೆ ಗೊತ್ತಿಲ್ಲ . ರಸ್ತೆಯ ಉಸ್ತುವಾರಿ ಯಾರು ನೋಡಿಕೊಳ್ಳುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಜಾಗದ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲ ಹಾಗೂ ನಾವು ಆ ಜಾಗದಲ್ಲಿ ಕಬ್ಜೆ ಇಲ್ಲ ಎಂದರೆ ಸರಿಯಲ್ಲ. ನಮ್ಮ ಜಾಗದ ಉತ್ತರಕ್ಕೆ ರಸ್ತೆ ಇದ್ದು ಅದರ ಉತ್ತರಕ್ಕೆ ಗುಡ್ಡ ಇದೆ ಎಂದರೆ ಸರಿ. ಆ ಗುಡ್ಡದಲ್ಲಿ ಬೀಳುವ ಮಳೆಗಾಲದ ನೀರು ಅನಾದಿ ಕಾಲದಿಂದ ರಸ್ತೆ ಅಡಿಯಲ್ಲಿ ಇದ್ದ ತುಬಾರಿಯ ಮುಖಾಂತರ ದಾವಾ ಜಾಗದ ಮೂಲಕ ಮುಂದೆ ಹರಿದು ಹೋಗುತ್ತಿತ್ತು ಎಂದರೆ ಸರಿಯಲ್ಲ . ನಮ್ಮ ತಾಯಿ ದಾವಾ ಆಸ್ತಿಯನ್ನು ಖರೀದಿ ಮಾಡುವ ಕಾಲದಲ್ಲಿ ದಸ್ತಾವೇಜಿನಲ್ಲಿ ಆ ರೀತಿ ನೀರು ಹರಿದು ಹೋಗಲು ಆತಂಕ ಪಡಿಸಬಾರದು ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಅಲ್ಲಿ ನೀರು ಹರಿದು ಹೋಗುವುದಿಲ್ಲ ಎಂದ ಮೇಲೆ ಅದನ್ನು ದಸ್ತಾವೇಜಿನಲ್ಲಿ ಬರೆಯುವ ಸಂದರ್ಭವೇ ಬರುವುದಿಲ್ಲ ಎನ್ನುತ್ತಾರೆ. ನಾವು ದಸ್ತಾವೇಜನ್ನು ಹಾಜರುಪಡಿಸಿದರೆ ಈ ವಿಷಯ ತಿಳಿಯುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಜಾಗವನ್ನು ಖರೀದಿ ಮಾಡುವ ಪೂರ್ವದಲ್ಲೇ ಮೇಲೆ ಹೇಳಿದ ರಸ್ತೆಯನ್ನು ಜಿಲ್ಲಾಪಂಚಾಯತಿಯವರು ಅಗಲೀಕರಣ ಹಾಗೂ ಡಾಂಬರೀಕರಣ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಖರೀದಿ ಮಾಡುವ ಪೂರ್ವದಲ್ಲೇ ಆ ರಸ್ತೆಗೆ ತುಬಾರಿಯನ್ನು ಜಿಲ್ಲಾ ಪಂಚಾಯತಿಯವರು ಕೂರಿಸಿದ್ದರು ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿ ಖರೀದಿ ಮಾಡಿದ ನಂತರ ಆ ತುಬಾರಿ ಗೆ ಕಲ್ಲು ಮಣ್ಣನ್ನು ತುಂಬಿ ನಮ್ಮ ಜಾಗಕ್ಕೆ ನೀರು ಬರದ ಹಾಗೆ ಮಾಡಿರುತ್ತೇವೆ ಎಂದರೆ ಸರಿಯಲ್ಲ . ನಾವು ಆ ರೀತಿ ಮಾಡಿದ್ದರಿಂದ ಮಳೆಗಾಲದ ನೀರು ರಸ್ತೆ ಮೇಲೆ ಹರಿಯುತ್ತದೆ ಇದರಿಂದ ತೊಂದರೆ ಆಗುತ್ತದೆ ಎಂದು ಊರ ಜನರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ , ಯೋಜನಾಧಿಕಾರಿ ಕಾರವಾರ ಇವರಿಗೆ ದೂರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದೂರಿನ ಪ್ರಕಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಯೋಜನಾಧಿಕಾರಿ ಕಾರವಾರ ರವರು ದಿಃ 20.05.2013 ರಂದು 1 ನೇ ಪ್ರತಿವಾದಿಗೆ ಅದನ್ನು ಖುಲ್ಲಾ ಪಡಿಸಬೇಕು ಎಂದು ನಿರ್ದೇಶಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ 1 ನೇ ಪ್ರತಿವಾದಿಗೆ ನಿರ್ದೇಶಿಸಿದ ನಂತರ ನನ್ನ ತಾಯಿಗೆ ದಿಃ 28.05.2013 ರಂದು ಬರವಣಿಗೆಯಲ್ಲಿ ನೋಟೀಸ್ ಕೊಟ್ಟು ತುಬಾರಿಯನ್ನು ಖುಲ್ಲಾ ಪಡಿಸಬೇಕು ಎಂದು ಸೂಚಿಸಿದ್ದರು ಎಂದರೆ ಸರಿಯಲ್ಲ . ಆ ರೀತಿ 1 ನೇ ಪ್ರತಿವಾದಿಯಿಂದ ನಮಗೆ ನೋಟೀಸ್ ಬಂದ ನಂತರ ನನ್ನ ತಾಯಿ ವಕೀಲರ ಮುಖಾಂತರ ದಿಃ 05.04.2013 ರಂದು 1 ಮತ್ತು 2 ನೇ ಪ್ರತಿವಾದಿಯರಿಗೆ ನೋಟೀಸು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ನೋಟೀಸು 1 ಮತ್ತು 2 ನೇ ಪ್ರತಿವಾದಿಯರಿಗೆ ದಿಃ 07.06.2013 ಕ್ಕೆ ತಲುಪಿತ್ತು ಎಂದರೆ ನನಗೆ

ಗೊತ್ತಿಲ್ಲ. ಆ ನೋಟೀಸಿಗೆ 1 ಮತ್ತು 2 ನೇ ಪ್ರತಿವಾದಿಯರು ದಿಃ 22.07.2013 ರಂದು ಪ್ರತ್ಯುತ್ತರ ನೋಟೀಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ 1 ಮತ್ತು 2 ನೇ ಪ್ರತಿವಾದಿಯರು ನನ್ನ ತಾಯಿಗೆ ನೋಟೀಸ್ ನೀಡಿದ ಬಗ್ಗೆ ನನ್ನ ತಾಯಿಯಿಂದ ತಿಳಿದುಕೊಂಡಿರುವುದಿಲ್ಲ. ದಾವೆಯಲ್ಲಿ 1 ಮತ್ತು 2 ನೇ ಪ್ರತಿವಾದಿಯರು ನೀಡಿದ ನೋಟೀಸನ್ನು ಹಾಜರುಪಡಿಸಿದ್ದೇವೋ ಇಲ್ಲವೋ ಗೊತ್ತಿಲ್ಲ. ಇದಾದ ನಂತರ ದಿಃ 16.08.2013 ರಂದು ಊರಿನ ಜನರು ಸೇರಿ ಜಿಲ್ಲಾಧಿಕಾರಿಯವರಿಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದೂರಿನ ಪ್ರಕಾರ ಜಿಲ್ಲಾಧಿಕಾರಿಗಳು ಗ್ರಾಮ ಪಂಚಾಯತಿಗೆ ಕೂಡಲೇ ತುಬಾರಿಯನ್ನು ಖುಲ್ಲಾ ಪಡಿಸಬೇಕು ಎಂದು ನಿರ್ದೇಶಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ಆ ರೀತಿ ನಿರ್ದೇಶನ ಬಂದ ನಂತರ 1 ನೇ ಪ್ರತಿವಾದಿ ನನ್ನ ತಾಯಿಗೆ ದಿಃ 26.08.2013 ಕ್ಕೆ ನೋಟೀಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ . ಆ ನೋಟೀಸ್ ಬಂದ ನಂತರ ಈ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಮ್ಮ ಜಾಗದ ಮುಖಾಂತರ ನೀರು ಹರಿಯುತ್ತಿರಲಿಲ್ಲ ಆದರೆ ಊರಿನ ಜನರು ಸೇರಿ ರಸ್ತೆಯನ್ನು ಅಗೆದು ಪೈಪ್ ನ್ನು ದಾವೆ ಮಾಡಿದ ದಿನವೇ ಅಳವಡಿಸಿ ನಮ್ಮ ಜಾಗದ ಮೂಲಕ ನೀರು ಹರಿದು ಹೋಗುವಂತೆ ಮಾಡಿದ್ದಾರೆ ಎನ್ನುತ್ತಾರೆ. ಆ ಪೈಪ್ ಎಷ್ಟು ಇಂಚಿನ ಪೈಪ್ ಎಂದು ನನಗೆ ಗೊತ್ತಿಲ್ಲ. ಆದರೆ ಪೈಪ್ ಅಳವಡಿಸಿದ್ದಾರೆ. ಆ ಪೈಪ್ ಗಳ ಒಳ ವ್ಯಾಸ 3 ರಿಂದ 3 1/2 ಫೂಟ್ ಇರಬಹುದು. ಎಷ್ಟು ಪೈಪ್ ಜೋಡಿಸಿದ್ದಾರೆ ಗೊತ್ತಿಲ್ಲ. ಆದರೆ ಪೈಪ್ ಅಳವಡಿಸಿದ್ದಾರೆ. ಆ ರೀತಿ ಪೈಪ್ ಒಂದೇ ದಿನ ಅಳವಡಿಸಿದ್ದಾರೆ. ಸುಮಾರು 15-20 ಜನ ಸೇರಿ ಪೈಪ್ ಹಾಕಿದ್ದಾರೆ. ಗ್ರಾಮ ಪಂಚಾಯತಿಯವರು ಕೂಡ ಅವರಲ್ಲಿ ಇದ್ದರು. ಆ ಪೈಪ್ ಅನಾದಿಯಿಂದ ಇರುವ ಪೈಪ್ ಅಂದರೆ ಸರಿಯಲ್ಲ. ಆ ಪೈಪ್ ನ್ನು ಮಳೆಗಾಲದಲ್ಲಿ ಹರಿಯುವ ನೀರು ಸರಾಗವಾಗಿ ಹರಿದು ನಮ್ಮ ಜಾಗದ ಮುಖಾಂತರ ಮುಂದೆ ಹೋಗುವಂತೆ ಮಾಡಿದ್ದರು ಅಂದರೆ ಸರಿಯಲ್ಲ . ನಾವು ಜಾಗ ಖರೀದಿ ಮಾಡಿದ ನಂತರ ಆ ಪೈಪ್ ನ ಮುಖಾಂತರ ಹರಿದು ಬರುವ ನೀರನ್ನು ತಡೆ ಹಿಡಿದಿದ್ದೆವು ಅಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಈ ದಾವೆಯಲ್ಲಿ ಪ್ರತಿ ಮಾಗಣಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ಮಾಡಿರುವ ಪ್ರತಿಮಾಗಣಿಗೆ ನಮ್ಮ ತಕರಾರಿದೆ. ಪಂಚಾಯತಿಯವರು ರಸ್ತೆಗಾಗಿ ಲಕ್ಷಾಂತರ ರೂ ಖರ್ಚು ಮಾಡಿದ್ದಾರೆ, ಅವರ ಆ ರಸ್ತೆಯನ್ನು ಹಾಳು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಮಳೆಗಾಲದ ನೀರು ರಸ್ತೆ ಮೇಲೆ ಹರಿಯುವುದಿಲ್ಲ ಪಕ್ಕದಲ್ಲಿರುವ ಕಾಲುವೆಯಿಂದ ಹರಿದು ಹೋಗುತ್ತದೆ ಎನ್ನುತ್ತಾರೆ. ಮಳೆಗಾಲದಲ್ಲಿ ನೀರು ರಸ್ತೆಯಲ್ಲಿ ಅಳವಡಿಸಿರುವ ತುಬಾರಿ ಮೂಲಕ ಹರಿದು ನಮ್ಮ ಜಾಗದ ಮುಖಾಂತರ ಮುಂದೆ ಹರಿದು ಹೋಗುತ್ತಿತ್ತು ಅಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ನಾನು ನ್ಯಾಯಾಲಯಕ್ಕೆ ಬಂದು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಕೇಳಿರುವ ಪ್ರತಿ ಮಾಗಣಿಯನ್ನು ಪಡೆಯಲು ಅವರು ಹಕ್ಕುದಾರರು ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.